ಬೀದರ್‌ನಲ್ಲಿ ಹಾಲಿನ ಡೈರಿ ಸ್ಥಾಪನೆ

776 - ಶ್ರೀ ಬಸವರಾಜ ಪಾಟೀಲ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೀದರ್‌ನಲ್ಲಿ ಹಾಲಿನ ಡೈರಿ ಪ್ರಾರಂಭಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಬೀದರ್‌ನಿಂದ ಗುಲ್ಬರ್ಗಕ್ಕೆ ಹಾಲು ಸರಬರಾಜು ಆಗುತ್ತಿರುವುದು ನಿಜವಲ್ಲವೇ?*

ಇ) *ಬೀದರ್ ಹೈನುಗಾರಿಕೆ ಪ್ರದೇಶವಾಗಿದ್ದು, ಇಲ್ಲಿ ಹಾಲಿನ ಡೈರಿ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಹೌದು.

ಆ) ನಿಜ.

ಇ) ಹೌದು.

ರಾಜ್ಯದಲ್ಲಿ ನಬಾರ್ಡ್ ಸಹಾಯದಿಂದ ತಾಲ್ಲೂಕುವಾರು ತೆಗೆದುಕೊಂಡ ಕೆಲಸಗಳು

777-ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ನಬಾರ್ಡ್ ಸಹಾಯದಿಂದ ತಾಲ್ಲೂಕವಾರು ತೆಗೆದುಕೊಂಡಿರುವ ಕೆಲಸಗಳು ಯಾವುವು?*

ಆ) *31.3.98ರವರೆಗೆ ಪ್ರತಿ ಕೆಲಸಕ್ಕೆ ಆದ ಖರ್ಚು ಎಷ್ಟು?*

ಇ) *ಇನ್ನು ಮುಂದೆ ತೆಗೆದುಕೊಳ್ಳಲು ಉದ್ದೇಶಿಸಿರುವ ರಸ್ತೆಗಳು ಯಾವುವು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಅನುಬಂಧದಲ್ಲಿ ವಿವರ ನೀಡಿದೆ.

ಆ) ಒಟ್ಟಾರೆ, 36.41 ಕೋಟಿ ರೂ.ಗಳು ವೆಚ್ಚವಾಗಿದೆ.

ಇ) ನಬಾರ್ಡ್ ಸಾಲ ಯೋಜನೆಯಡಿ ಪ್ರಸ್ತಾವಿಸಲು ಅಧಿಕಾರದತ್ತ ಸಮಿತಿಯ ಸಭೆಯಲ್ಲಿ ಒಪ್ಪಿತವಾಗಿರುವ ರಸ್ತೆ ಕಾಮಗಾರಿಗಳ ವಿವರ ಅನುಬಂಧದಲ್ಲಿ ನೀಡಿದೆ. ಇವುಗಳು ನಬಾರ್ಡ್ ನಿಂದ ಮಂಜೂರಾದರೆ ಕೈಗೊಳ್ಳಬಹುದಾಗಿದೆ.